# ಒಂದೇ ಒಂದು ಅಶ್ಲೀಲ ಶಬ್ದವಿಲ್ಲ!



**ನಾಗಭೂಷಣ**
**ಕಲರ್ಸ್ ಸೂಪರ್‌ನ 'ಸೂಪರ್ ದಂಪತಿ'ಗಳು ನಿರ್ದೇಶಕ**

◆ **ಸಂಚಾರಿ ವೇದಿಕೆ ರೂಪಿಸಿದ್ದು ಹೇಗೆ?**

ಊರೂರು ಸುತ್ತಿ ಗಂಡ–ಹೆಂಡತಿಗೆ ಆಟ ಆಡಿಸಬೇಕು ಎನ್ನುವ ಯೋಚನೆ ನಮಗೆ ಬಂತು. ಬಹುತೇಕ ಚಿತ್ರೀಕರಣಗಳು ಬೆಂಗಳೂರು ಇಲ್ಲವೇ ಜಿಲ್ಲಾ ಕೇಂದ್ರಗಳಿಗೆ ಸೀಮಿತವಾಗಿವೆ. ಜನರ ಬಳಿಗೆ ವೇದಿಕೆಯನ್ನು ತೆಗೆದುಕೊಂಡು ಹೋಗುವುದು ನಮ್ಮ ಪರಿಕಲ್ಪನೆ. ಊರಿಂದೂರಿಗೆ ಹೋಗಿ ಸೆಟ್ ಹಾಕುವುದು ಕಷ್ಟ. ಅದಕ್ಕಾಗಿ ಸಂಚಾರಿ ಸೆಟ್ ರೆಡಿ ಮಾಡಿದ್ದೇವೆ. ಮುಂಬೈ ತಂತ್ರಜ್ಞರು ಕಂಟೇನರ್ ಒಂದರಲ್ಲಿ ಅದನ್ನು ರೂಪಿಸಿದ್ದಾರೆ.

ಕಂಟೇನರ್ ಆಮೆಯಂತಿದೆ. ಅದರೊಳಗೆ 30X40 ಅಳತೆಯ ವೇದಿಕೆ ಅವಿತುಕೊಂಡಿರುತ್ತದೆ. ಬಟನ್ ಒತ್ತಿದರೆ ಮಾತ್ರ ಅದು ತೆರೆದುಕೊಳ್ಳುತ್ತದೆ. ಅದರ ಜೊತೆ ಮತ್ತೆರಡು ಕಂಟೇನರ್ ಇವೆ. ಒಂದನ್ನು ಪಿಸಿಆರ್ ರೀತಿಯಲ್ಲಿ ಬಳಸುತ್ತೇವೆ. ಅಂದರೆ ಕಾರ್ಯಕ್ರಮ ನಿಯಂತ್ರಣ ಕೊಠಡಿಯಂತೆ. ಮತ್ತೊಂದು ಆಟಕ್ಕೆ ಬೇಕಾಗುವ ಸಾಮಗ್ರಿಗಳನ್ನು ಒಳಗೊಂಡಿರುತ್ತದೆ.

◆ **ಸೂಪರ್ ದಂಪತಿಗೆ ಸ್ಪರ್ಧಿಗಳ ಆಯ್ಕೆ ಮತ್ತು ಆಡಿಸುವ ಕ್ರಮ ಹೇಗಿರುತ್ತದೆ?**

ಒಂದು ಶೋಗೆ ನಾಲ್ಕು ಜೋಡಿಯನ್ನು ಆಯ್ಕೆ ಮಾಡುತ್ತೇವೆ. ವೂಟ್ (Voot app) ಮೂಲಕ ಇಲ್ಲವೇ ಜೋಡಿಗಳನ್ನು ಸಂಧಿಸಿ ಆಡಿಷನ್ ಮೂಲಕ ಆಯ್ಕೆ ಮಾಡುತ್ತೇವೆ. ಸ್ಪರ್ಧಿಗಳು ಕ್ರಿಯಾಶೀಲರಾಗಿರಬೇಕು, ಆಟ ಆಡುವ ಆಸಕ್ತಿ ಇದ್ದರೆ ಸಾಕು. ಮೂರು ಸುತ್ತಿನಲ್ಲಿ ಆಟವನ್ನು ಆಡಿಸುತ್ತೇವೆ. ಜೋಡಿಗಳ ಬದುಕಿನಲ್ಲಿ ಘಟಿಸಿದ ಸ್ವಾರಸ್ಯಕರ ಘಟನೆಗಳನ್ನು ಪರಿಚಯಿಸುತ್ತಾ ವೇದಿಕೆಗೆ ಕರೆತರುವುದೇ ಒಂದು ಸೆಗ್ಮೆಂಟ್. ನಂತರ ಒಂದು ಆಟ. ಸಣ್ಣ ಸಣ್ಣ ಆಟ ಆದರೂ ಆಡುವುದು ಕಷ್ಟ. ಒಂದು ಕಡ್ಲೆಕಾಯಿ ಬೀಜವನ್ನು ಸ್ಥಳಾಂತರಿಸಬೇಕು. ಅದನ್ನು ಹೇಗೆ ತೆಗೆದುಕೊಂಡು ಹೋಗುತ್ತಾರೆ ಎನ್ನುವುದೇ ಆಟದ ಮಜಾ. ಸ್ಟ್ರಾದಲ್ಲಿ ಉಸಿರುಗಟ್ಟಿ ಆ ಕಡ್ಲೆ ಬೀಜವನ್ನು ಹಿಡಿಯಬೇಕು. ನೋಡಲು ತುಂಬ ಸುಲಭ; ಆಡುವುದು ತುಂಬ ಕಷ್ಟ. ಮೊದಲ ಸುತ್ತಿನಲ್ಲಿ ಒಬ್ಬರು ಹೊರ ಹೋಗುತ್ತಾರೆ. ನಂತರ ಮತ್ತೊಬ್ಬರು ಹೊರ ಹೋಗುತ್ತಾರೆ. ಉಳಿದ ಇಬ್ಬರಲ್ಲಿ ಒಂದು ಜೋಡಿ ಸೂಪರ್ ದಂಪತಿ ಆಗುತ್ತದೆ. ಆ ಜೋಡಿಗೆ ಮರುಮದುವೆ ಮಾಡುವ ಮೂಲಕ ಸಂಭ್ರಮಿಸುತ್ತೇವೆ. ಮರುದಿನ ಮತ್ತೊಂದೂರಿಗೆ ಹೋಗುತ್ತೇವೆ. 240 ತಾಲ್ಲೂಕು ಕೇಂದ್ರಗಳಲ್ಲಿ ಚಿತ್ರೀಕರಣ ಮಾಡುತ್ತೇವೆ. ಈವರೆಗೆ 20 ತಾಲ್ಲೂಕುಗಳನ್ನು ಪೂರೈಸಿದ್ದೇವೆ. ಈಗ ರಾಯಚೂರು ಜಿಲ್ಲೆಯತ್ತ ನಮ್ಮ ಪಯಣ ಸಾಗಿದೆ.

◆ **'ಸೂಪರ್ ದಂಪತಿ'ಯ ಭಾಷೆ ಬಗ್ಗೆ ಆಕ್ಷೇಪದ ಮಾತು ಕೇಳಿಬಂದಿದೆಯಲ್ಲ?**

'ಸುಧಾ' ಜಾಣರ ಪೆಟ್ಟಿಗೆಯಲ್ಲಿಯೇ ವೀಕ್ಷಕರ ಆಕ್ಷೇಪವನ್ನು ಓದಿದ್ದೇನೆ. ಆ ಬಗ್ಗೆ ಆತ್ಮಾವಲೋಕನವನ್ನೂ ಮಾಡಿದ್ದೇವೆ. ಭಾಷೆಯನ್ನು ತೆಗೆದುಕೊಳ್ಳುವುದರ ಮೇಲೆ ಅದು ಅರ್ಥವಾಗುತ್ತದೆ. ಉದಾಹರಣೆಗೆ 'ಒಂದು ವಸ್ತುವನ್ನು ತೆಗೆದು ಇಡಬೇಕು. ಅದನ್ನು ಸರಿಯಾದ ಜಾಗಕ್ಕೆ ಇಡಬೇಕು' ಎನ್ನುವುದು ಆಟವಾಗಿರುತ್ತದೆ. ನಿರೂಪಿಸುವಾಗ 'ರೀ ಸರಿಯಾಗಿ ಇಡ್ರಿ... ನಿಮಗೇನ್ರೀ... ಇಡಲೂ ಬರುವುದಿಲ್ಲವಲ್ರೀ ಏನ್ರೀ ಹಿಂಗಾದ್ರೆ' ಎಂದು ಹೇಳುತ್ತಾರೆ. ಅದು ಸಹಜವಾಗಿ ತೆಗೆದುಕೊಳ್ಳಬೇಕು. ಡಬಲ್ ಮೀನಿಂಗ್ ಬರಲಿ ಎಂದು ಹಾಗೆ ಹೇಳುವುದಿಲ್ಲ. ನಮ್ಮಲ್ಲಿ ಅಶ್ಲೀಲ ಶಬ್ದ ಬಳಸಲ್ಲ. ಇತ್ತೀಚಿನ ಆಟ 'ಖರ್ಜೂರವನ್ನು ಹೆಂಡತಿ ತಿಂದು ಬೀಜವನ್ನು ಗಂಡನ ಕೈಯಲ್ಲಿ ಕೊಡಬೇಕು. ಆತ ಅದನ್ನು ಒಂದು ಡಬ್ಬದಲ್ಲಿ ಹಾಕಬೇಕು. ಆಗ ಬೀಜ ಎಂದು ಬಳಸಲೇಬೇಕು. ಸ್ಕ್ರಿಪ್ಟ್‌ನಲ್ಲಿಯೂ ಅಶ್ಲೀಲ ಮಾತ್ರವಲ್ಲ ಜಾತಿ, ಧರ್ಮ ವ್ಯಕ್ತಿ ನಿಂದಕ ಪದವನ್ನೂ ಬಳಸುವುದಿಲ್ಲ. ಆಡುವ ಹುರಿಯಾಳುಗಳನ್ನು ಹುರಿದುಂಬಿಸುವಾಗ 'ಎತ್ತಪ್ಪ... ಎತ್ತಪ್ಪ...' ಎಂದು ಹೇಳಲೇಬೇಕಾಗುತ್ತದೆ. ನಾವು ಶಬ್ದವನ್ನು ದುರ್ಬಳಕೆ ಮಾಡುವುದಿಲ್ಲ.

◆ **ವಿಶೇಷ ದಿನಗಳ ಕಾರ್ಯಕ್ರಮವನ್ನು ರೂಪಿಸುವ ಸವಾಲು ಹೇಗಿರುತ್ತದೆ?**

ಈ ಹಿಂದೆ ಒಂದು ಅಂಧರ ಸಂಸ್ಥೆಯೊಂದಕ್ಕೆ ಡಾಕ್ಯುಮೆಂಟರಿ ಮಾಡಿಕೊಟ್ಟಿದ್ದೆವು. ಅಲ್ಲಿ ಮಕ್ಕಳು ಕೇವಲ ಸ್ಪರ್ಶದಿಂದಲೇ ಲೋಕವ್ಯವಹಾರ ಮಾಡುವ ಬಗೆ ಕಂಡು ನನಗೆ ಅಚ್ಚರಿಯಾಗಿತ್ತು. ಅದು ನನಗೆ ತುಂಬ ಪರಿಣಾಮ ಬೀರಿತ್ತು. ದೃಷ್ಟಿಹೀನರು ಕೆಲವೊಂದು ವಿಷಯಗಳಲ್ಲಿ ನತದೃಷ್ಟರು. ಅವರು ಟೀವಿಯಲ್ಲಿ ಕಾಣಿಸಿಕೊಳ್ಳುವುದೂ ಅಪರೂಪ. ಅವರನ್ನೇ ಕೇಂದ್ರವಾಗಿ ಇಟ್ಟುಕೊಂಡು ದೃಷ್ಟಿಯ ಪ್ರಾಮುಖ್ಯತೆಯನ್ನು ತಿಳಿಸುವುದು ನಮ್ಮ ಉದ್ದೇಶ ಆಗಿತ್ತು. ಆ ಮೂಲಕ ಮೃತದೇಹದ ಕಣ್ಣನ್ನು ಬೆಂಕಿಗೆ ಆಹುತಿ ಮಾಡದೆ ಯಾರಿಗಾದರೂ ದೃಷ್ಟಿದಾನ ಮಾಡುವ ಅವಕಾಶ ಸಿಗಲಿ ಎನ್ನುವ ಆಸೆ ನಮ್ಮದಾಗಿತ್ತು. 'ಅಂತರರಾಷ್ಟ್ರೀಯ ದೃಷ್ಟಿ ದಿನ'ದ ಅಂಗವಾಗಿ ರೂಪಿಸಿದ ಕಾರ್ಯಕ್ರಮದಿಂದ ಕುರುಡನೊಬ್ಬನಿಗೆ ಒಂಟಿಗಣ್ಣಿನ ನೋಟ ಸಿಕ್ಕರೂ ನಮ್ಮ ಆಶಯ ಸಾರ್ಥಕ.

ಅದೇ ರೀತಿ ವೈದ್ಯ ದಂಪತಿ ಕಾರ್ಯಕ್ರಮ ಮಾಡಿದ್ದೇವೆ. ಯಾರಿಗೇ ಆದರೂ ಅವರಿಗೆ ಸಂಬಂಧಿಸಿದ ಆಟಗಳನ್ನೇ ಆಡಿಸುತ್ತೇವೆ. ವೈದ್ಯರಿಗೆ ಔಷಧ, ಸಿರಿಂಜ್ ಹೀಗೆ ವೃತ್ತಿ ಸಂಬಂಧಿತ ಆಟವನ್ನೇ ಮಾಡಿದ್ದೆವು. ಆಡುವವರಿಗೆ ಆತ್ಮವಿಶ್ವಾಸ ಇರುತ್ತದೆ, ಆದರೂ ಖುಷಿಯಲ್ಲಿ ಒಂದಿಷ್ಟು ಕಷ್ಟಪಟ್ಟು ಸೋಲುವುದು ನೋಡುಗರಿಗೆ ಮಜಾ ಕೊಡುತ್ತದೆ.

■ **ರಾಘವೇಂದ್ರ ಕೆ.**